ADVT

# ಸರಿಯಾದ ಸಮಯದಲ್ಲಿ ಸ್ಕ್ರೀನಿಂಗ್ ನಿಮ್ಮ ಜೀವ ಉಳಿಸಬಹುದು

ರೋಗವನ್ನು ವಾಸಿಮಾಡುವುದಕ್ಕಿಂತ ಅದು ಬರದಂತೆ ತಡೆಗಟ್ಟುವುದು ಉತ್ತಮ ಎಂದು ಹೇಳುವುದು ಸರಿಯಾಗಿಯೇ ಇದೆ. ಅಹಲ್ಯಾ (ಹೆಸರು ಬದಲಿಸಲಾಗಿದೆ)ರಿಗೆ ಇದರ ಅರಿವಾಗಲು ಅವರ ಬದುಕಿನ ಅತ್ಯಂತ ಸಮಯದ ಮೂಲಕ ಹಾದು ಬರಬೇಕಾಯಿತು. ಆದರೆ ಈ ಕಥೆಯ ಇನ್ನೊಂದು ಪಾತ್ರ ರಾಣು ಇಲ್ಲಿನ ಜಯಶಾಲಿ ವ್ಯಕ್ತಿ.

ಸೈಟ್‌ಕೇರ್ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಪರಿಣತಿ/ವಿಶೇಷ ಸ್ಥಾನ ಹೊಂದಿದೆ. ತಮ್ಮಲ್ಲಿಗೆ ಬರುವ ಕ್ಯಾನ್ಸರ್ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವ ದಿಶೆಯಲ್ಲಿ ಇತ್ತೀಚೆಗೆ ಸ್ಕ್ರೀನಿಂಗ್ ಸೌಲಭ್ಯವನ್ನು ಒದಗಿಸಿದೆ. ಇದು ನಗರ ಪ್ರದೇಶದ ಜನರಿಂದ ಉತ್ತಮ ಪ್ರತಿಕ್ರಿಯೆ ಮತ್ತು ಮೆಚ್ಚುಗೆಗೆ ಪಾತ್ರವಾಗಿದೆ.

ರಾಣು ಎಂಬ 61 ವರ್ಷದ ಮಹಿಳೆ, ತಮ್ಮ ಕೆನಡಾ ಪ್ರವಾಸದ ಕುರಿತು ಬಹಳ ಉತ್ಸುಕರಾಗಿದ್ದರು. ಆದರೆ ಒಂದು ದಿನ ತಮ್ಮ ಕುತ್ತಿಗೆಯಲ್ಲಿ ಊತವನ್ನು ಗಮನಿಸಿದ ಅವರು, ವೈದ್ಯರನ್ನು ಭೇಟಿ ಮಾಡಿದರು. ವೈದ್ಯರ ರೋಗನಿರ್ಣಯ ಅವರಿಗೆ ತೃಪ್ತಿ ಎನಿಸದೆ ಇನ್ನೂ ಐದು ಜನ ವೈದ್ಯರನ್ನು ಭೇಟಿ ಮಾಡಿದರೂ ಸಹ ತಮಗೆ ಏನಾಗಿದೆ ಎಂದು ಸರಿಯಾಗಿ ತಿಳಿದುಕೊಳ್ಳದಾದರು.

ತಮ್ಮ ಆರೋಗ್ಯದ ಕುರಿತು ವಿಚಾರಿಸುತ್ತಾ ಮುಂದುವರೆದಾಗ ಅವರಿಗೆ ಸೈಟ್‌ಕೇರ್ ಪರಿಚಯಿಸಿರುವ ಕ್ಯಾನ್ಸರ್ ಸ್ಕ್ರೀನಿಂಗ್ ಬಗ್ಗೆ ತಿಳಿಯಿತು. ಸೈಟ್‌ಕೇರ್‌ಗೆ ತೆರಳಿ ಅಲ್ಲಿನ ವೈದ್ಯರನ್ನು ಭೇಟಿ ಮಾಡಿ ಒಂದು ಸಂಪೂರ್ಣ ಬ್ರೆಸ್ಟ್ ಸ್ಕ್ಯಾನಿಂಗ್ ಪ್ರೋಗ್ರಾಮ್ ಮಾಡಿಸಿದರು. ಸ್ಕ್ರೀನಿಂಗ್ ಮಾಡಿಸಿಕೊಳ್ಳುವಾಗ ಹಾಗೇ ತಮ್ಮ ಕುತ್ತಿಗೆಯಲ್ಲಿನ ಕಡೆಗೂ ಗಮನ ಹರಿಸುವಂತೆ ವೈದ್ಯರಿಗೆ ಹೇಳಿದರು. ಪರೀಕ್ಷೆ ಮಾಡಿದಾಗ ಅವರ ಕುತ್ತಿಗೆಯಲ್ಲಿ ಒಂದು ಗಂಟು ಇರುವುದು ತಿಳಿಯಿತು.

ವೈದ್ಯರು ಅವರಿಗೆ ಕೂಡಲೇ ಬಯಾಪ್ಸಿ ಮಾಡಿಸಿಕೊಳ್ಳಲು ಸೂಚಿಸಿದರು. ಅದರಂತೆ ಬಯಾಪ್ಸಿ ಮಾಡಿಸಿಕೊಂಡಿದ್ದರಿಂದ ಅವರಿಗೆ ಪ್ರಾಣಹಾನಿಯಾಗುವುದು ತಪ್ಪಿತು. ಆದರೆ 59 ವರ್ಷ ವಯಸ್ಸಿನ ಅಹಲ್ಯರ ವಿಷಯದಲ್ಲಿ ಹಾಗಾಗಲಿಲ್ಲ. ವೈದ್ಯರ ಸಲಹೆಯಂತೆ ಪರೀಕ್ಷೆ ಮಾಡಿಸಿಕೊಳ್ಳದೇ ಸ್ಥಳೀಯ ಉಪಚಾರಕ್ಕೆ ಮೊರೆಹೋದರು. ಈಗ ಅವರು ಸ್ತನ ಕ್ಯಾನ್ಸರಿನ ಕೊನೆ ಹಂತದಿಂದ ನರಳುತ್ತಿದ್ದಾರೆ. ವೈದ್ಯರ ಸಲಹೆಯಂತೆ ಆಕೆ ಸೂಕ್ತ ಪರೀಕ್ಷೆಗಳನ್ನು ಮಾಡಿಸಿಕೊಂಡಿದ್ದರೆ ಅವರ ಜೀವ ಉಳಿಯುತ್ತಿತ್ತು. ಆದರೆ ಈಗ ಬಹಳ ತಡವಾಗಿದೆ.

ರಾಣು ಅವರು 32 ದಿನಗಳ ಒಂದು ಸುದೀರ್ಘ ಕೆನಡಾ ಪ್ರವಾಸಕ್ಕೆ ಸಜ್ಜಾಗಿದ್ದರು. ಮೊದಲ ತಪಾಸಣೆ ನಂತರ ವೈದ್ಯರು ಅವರಿಗೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವಂತೆ ಸೂಚಿಸಿದರು. ಆದರೆ ಅದಾಗಲೇ ಅವರು ಟಿಕೆಟ್ ಕಾಯ್ದಿರಿಸಿದ್ದರಿಂದ, ಪ್ರಾಥಮಿಕ ಔಷಧಿಗಳನ್ನು ನೀಡಿ ಪ್ರವಾಸ ಹೋಗಲು ವೈದ್ಯರು ಅವರಿಗೆ ಅನುಮತಿ ನೀಡಿದರು. ಪ್ರವಾಸ ಮುಗಿಸಿಕೊಂಡು ಬಂದು ಚಿಕಿತ್ಸೆಯನ್ನು ಮುಂದುವರೆಸಿರುವ ರಾಣು ರವರ ಆರೋಗ್ಯ ಸುಧಾರಿಸುತ್ತಿದೆ. ಸಧ್ಯದಲ್ಲೇ ಅವರು ಈಗ ಮತ್ತೊಂದು ಸಾಹಸಕ್ಕೆ ಸಜ್ಜಾಗಲಿದ್ದಾರೆ ಎಂದು ವೈದ್ಯರು ಆಶಯ ವ್ಯಕ್ತಪಡಿಸುತ್ತಾರೆ.

ಕುತ್ತಿಗೆ–ತಲೆ ಕ್ಯಾನ್ಸರ್ ಶಸ್ತ್ರಚಿಕಿತ್ಸೆಯ ಹಿರಿಯ ವೈದ್ಯರಾಗಿರುವ ಡಾ.ವಿಕ್ರಂ ಕೇಕಾಪುರೆ ಯವರು, ''ಉಪಾಯ ಕೈಗೊಂಡವನಿಗೆ ಅಪಾಯವಿಲ್ಲ ಅನ್ನೋಹಾಗೆ, ರಾಣುರವರು ಸ್ಕ್ರೀನ್ ಮಾಡಿಸಿಕೊಂಡರು, ಒಂದು ಸಣ್ಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರಿಂದ ತಮ್ಮ ಕಾಯಿಲೆಗೆ ಶಾಶ್ವತ ಪರಿಹಾರ ಕಂಡುಕೊಂಡರು. ಜನ ತಮ್ಮ ದಿನನಿತ್ಯದ ಆರೋಗ್ಯದಲ್ಲಿ ಏನಾದರೂ ಏರುಪೇರು ಕಂಡರೆ, ವೈದ್ಯರಲ್ಲಿಗೆ ಪರೀಕ್ಷೆ ಮಾಡಿಸಿಕೊಳ್ಳುವುದು ಅಗತ್ಯ.'' ಎನ್ನುತ್ತಾರೆ.



ಬೇರೆ ಬೇರೆ ವೈದ್ಯರ ಅಭಿಪ್ರಾಯ ಪಡೆದುಕೊಳ್ಳುವುದು ಒಳ್ಳೆಯದು. ಆದರೆ ನಿಮ್ಮ ವೈದ್ಯರ ಸಲಹೆಯಂತೆ ಸ್ಕ್ರೀನಿಂಗ್ ಮಾಡಿಸಿಕೊಳ್ಳದೇ ಇರುವುದು ತಪ್ಪು. ಅಹಲ್ಯರವರ ವಿಷಯ ಶೋಚನೀಯ. ಅವರು ಎರಡು ವರ್ಷಗಳ ಹಿಂದೆ ಡಾ.ಅಂಥೋನಿ ಪಾಯ್ಸ್, ಹಿರಿಯ ತಜ್ಞರು, ಆಂಕೋಪ್ಲಾಸ್ಟಿಕ್ ಬ್ರೆಸ್ಟ್ ಸರ್ಜರಿ, ಅವರ ಬಳಿ ಬಂದರು. ವೈದ್ಯರು ಅವರಿಗೆ ಬಯಾಪ್ಸಿ ಮಾಡಿಸಿಕೊಳ್ಳಲು ಸೂಚಿಸಿದಾಗ ಅವರು ಅದನ್ನು ಪಾಲಿಸದೇ ಬೇರೆ ಬೇರೆ ತಜ್ಞರ ಅಭಿಪ್ರಾಯ ಪಡೆಯಲು ನಿರ್ಧರಿಸಿದರು.

ಸೂಕ್ತ ಚಿಕಿತ್ಸೆಯನ್ನು ಪಡೆಯಲಾಗದೇ ಅಹಲ್ಯರವರು ಸ್ಥಳೀಯವಾಗಿ ಲಭ್ಯವಿದ್ದ ಚಿಕಿತ್ಸೆಗೆ ಮೊರೆಹೋದರು. ನಂತರ ಆಕೆ ಸೈಟ್‌ಕೇರ್‌ನ ಅದೇ ವೈದ್ಯರಲ್ಲಿಗೆ ಬರಲು ನಿರ್ಧರಿಸಿದರು. ಆದರೆ ವೈದ್ಯರ ಪ್ರಕಾರ, ಆಕೆ ಈಗ ಕ್ಯಾನ್ಸರಿನ 4ನೇ ಮತ್ತು ಅಂತಿಮ ತಲುಪಿದ್ದಾರೆ. ಸರಿಯಾದ ಸಮಯದಲ್ಲಿ ಆಕೆ ಪರೀಕ್ಷೆ ಮಾಡಿಸಿಕೊಂಡಿದ್ದರೆ, ಈಗ ಅವರು ಸಂತೋಷವಾಗಿ ಇರಬಹುದಿತ್ತು.

ಡಾ.ಆಂಟನಿ ಪಾಯ್ಸ್ ರವರು ಹೇಳುತ್ತಾರೆ: ಭಾರತದಲ್ಲಿ ಕ್ಯಾನ್ಸರ್ ತಡೆಯಲು ಏಕಮಾತ್ರ ಪರಿಣಾಮಕಾರಿ ವಿಧಾನವೆಂದರೆ ಸ್ಕ್ರೀನ್ ಮಾಡಿಸಿಕೊಳ್ಳುವುದಲ್ಲ, ಅದರ ಕುರಿತು ತಿಳುವಳಿಕೆ ಹರಡುವುದಾಗಿದೆ. ಬದಲಾವಣೆ ಉಂಟುಮಾಡಲು ಧೋರಣೆ ಹೆಚ್ಚು ಕೆಲಸಮಾಡುತ್ತದೆ. ವಾಸಿಮಾಡಬಹುದಾದ ಸಾಮಾನ್ಯ ಕ್ಯಾನ್ಸರಿನ ಮುಂಚಿತವಾಗಿ ಸ್ಕ್ರೀನ್ ಮಾಡುವುದು ನಮ್ಮ ಗುರಿಯಾಗಬೇಕು. ಅದರಿಂದ ಕುಟುಂಬಗಳಿಗೆ ಚಿಕಿತ್ಸೆಯ ಖರ್ಚು ಕಡಿಮೆಯಾಗುತ್ತದೆ. ಚಿಕಿತ್ಸೆಯ ವಿಧಾನಗಳು ಕಡಿಮೆಯಾಗಿ ಖರ್ಚು ಮಾತ್ರವಲ್ಲದೆ ಅಡ್ಡಪರಿಣಾಮಗಳೂ ಕಡಿಮೆಯಾಗುತ್ತವೆ. ದೇಹದ ಅಂಗಾಂಗಗಳ ನಷ್ಟ ಅಥವಾ ಹಾನಿ ತಪ್ಪಿ, ಯಾವುದೇ ರೀತಿಯ ವಿಕಾರ ಉಂಟಾಗದೆ ಆನಂದವಾಗಿ ಜೀವಿಸುವುದು ಸಹ ಸಾಧ್ಯವಾಗುತ್ತದೆ.

ನಿಮಗೇನಾದರೂ ಅನುಮಾನ ಉಂಟಾದಲ್ಲಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಸ್ಕ್ರೀನ್ ಮಾಡಿಸಿಕೊಳ್ಳಿ. ಕ್ಯಾನ್ಸರನ್ನು ವಾಸಿಮಾಡಲು ಸೂಕ್ತ ಸಮಯದಲ್ಲಿ ಅದನ್ನು ಕಂಡು ಹಿಡಿದು ಸರಿಯಾದ ಚಿಕಿತ್ಸೆ ನೀಡುವುದರಿಂದ ಮಾತ್ರ ಸಾಧ್ಯ. ಸರಿಯಾದ ರೋಗನಿರ್ಣಯ ಮತ್ತು ಚಿಕಿತ್ಸೆ ಕ್ಯಾನ್ಸರಿಂದ ಮುಕ್ತಿಪಡೆಯುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.

ಸೈಟ್‌ಕೇರ್ ಕ್ಯಾನ್ಸರ್ ಆಸ್ಪತ್ರೆಗಳ ನಂಬಿಕೆಯೇ ಇದಾಗಿದೆ – ಸರಿಯಾದ ರೀತಿಯಲ್ಲಿ ಕ್ಯಾನ್ಸರನ್ನು ಎದುರಿಸುವುದು. ಸೈಟ್‌ಕೇರ್ ಕ್ಯಾನ್ಸರ್ ಆಸ್ಪತ್ರೆಗಳು ಆರ್ಗನ್ ಬೇಸ್ಡ್ ಕ್ಯಾನ್ಸರ್ ಟ್ರೀಟ್ಮೆಂಟ್‌ನಲ್ಲಿ ಪರಿಣತಿ ಹೊಂದಿದ್ದು ತನ್ನ ವಿಶಿಷ್ಟ ಅತ್ಯಾಧುನಿಕ ರೋಗನಿರ್ಣಯ ಸೇವೆ ಮತ್ತು ಚಿಕಿತ್ಸೆಗಳ ಮೂಲಕ ಪರಿಹಾರಗಳನ್ನು ಒದಗಿಸುತ್ತವೆ. ಪ್ರತಿಯೊಂದು ಕ್ಯಾನ್ಸರ್ ಕೂಡ ಭಿನ್ನವಾಗಿದ್ದು ಪ್ರತಿಯೊಂದಕ್ಕೂ ತಕ್ಕುದಾದ ಚಿಕಿತ್ಸೆ ನೀಡಬೇಕು ಎಂಬುದು ಸೈಟ್‌ಕೇರ್ ಆಸ್ಪತ್ರೆಗಳ ಬಲವಾದ ನಂಬಿಕೆ.

**ಹೆಚ್ಚಿನ ವಿವರಗಳಿಗೆ ಭೇಟಿ ನೀಡಿ www.cytecare.com**
**ಏರ್‌ಪೋರ್ಟ್ ರಸ್ತೆ, ಯಲಹಂಕ, ಬೆಂಗಳೂರು 1800 123 6767**

CYTECARE
CANCER HOSPITALS